ಪರಿಭಾಷೆಗೆ ಒಗ್ಗಿಕೊಂಡಂತೆ ಭಾಸವಾಗುತ್ತಿತ್ತು.

ಎಲ್ಲವನ್ನೂ ಬರೆದು ಮುಗಿಸಿ ಎದ್ದ ನಂತರ ಮನೋಹರನೇ ಅವಳ ಹತ್ತಿರ ನಿಂತು, 'ಥ್ಯಾಂಕ್ಸ್ ಕಾಮ್ರೇಡ್' ಎಂದಾಗ ಅಂಜಲಿಗೆ ಮರು ಉತ್ತರ ನೀಡಲು ಗೊತ್ತಾಗಲೇ ಇಲ್ಲ. ಮನೋಹರನ ಕಾರಣದಿಂದಲೇ ಮರುದಿನದ ಜಾಥಾ, ಬೀದಿ ನಾಟಕ, ವಿದ್ಯಾರ್ಥಿ ಹಾಗೂ ರೈತರೊಂದಿಗಿನ ಸಂವಾದ ಎಲ್ಲದರಲ್ಲೂ ಅಂಜಲಿ ಭಾಗವಹಿಸಿದ್ದಳು. ಮನೋಹರ ಯಾವಾಗಲೂ ಬಳಸುತ್ತಿದ್ದ ಸಮಾನತೆ, ವರ್ಗ ಸಂಘರ್ಷ, ಯುನೈಟ್, ಡೆಮಾಕ್ರಸಿ ಇಸ್ ಇನ್‌ಡಿಸ್‌ಪೆನ್ಸಬಲ್ ಟು ಸೋಷಿಯಲಿಸಂ ಹೀಗೆ ಹತ್ತಾರು ಮಾತುಗಳ ನಿಜಾರ್ಥ ತಿಳಿಯದಿದ್ದರೂ ಮನೋಹರನ ಈ ಕ್ರಿಯೆಗಳ ಜೊತೆಗೆ ಕೆಂಪು ಕಣ್ಣುಗಳು ಅವಳನ್ನು ಅವನೆಡೆಗೆ ಸಹಜವಾಗಿ ವಾಲುವಂತೆ ಮಾಡಿದ್ದವು.

ಮನೋಹರನೂ ತನಗೆ ಬಿಡುವು ಸಿಕ್ಕಾಗೆಲ್ಲ ಅಂಜಲಿಯೊಂದಿಗೆ ಕಾಲ ಕಳೆಯುವುದು, ಅವಳಿಗೆ ತನ್ನ ಈ ಕ್ರಿಯೆಗಳ ಮೂಲ ಉದ್ದೇಶಗಳನ್ನು ಅರ್ಥವಾಗುವಂತೆ ಹೇಳುವುದು, ಯಾರಿಗೂ ಹೇಳದೆ ಹತ್ತಾರು ದಿನಗಳು ಇನ್ನೆಲ್ಲಿಗೂ ಇನ್ನಾವುದೋ ಹೋರಾಟಕ್ಕೆ ಗುಟ್ಟಿನಲ್ಲಿ ಹೋಗಿ ಬರುವುದು ನಡೆದೇ ಇತ್ತು. ಹರಿಹರಪುರದ ಕುರಿತು ಜನರಲ್ಲಿ ಮೂಡಿದ ಒಂದು ಜಾಗೃತಿಯ ಫಲವಾಗಿಯೋ, ಮನೋಹರ ರೂಪಿಸಿದ ಹೋರಾಟದ ಫಲವಾಗಿಯೋ ಕಡೆಗೆ ಸರ್ಕಾರವೇ, 'ಹಾರುಬೂದಿ ಸಂಗ್ರಹಿಸಿ ಸರಬರಾಜು ಮಾಡಲು ನಿರ್ಮಿಸಬಹುದಾದ ಹೊಂಡಗಳಿಂದ ಕಲುಷಿಗೊಳ್ಳುವ ನೀರು ಹಳ್ಳಗಳ ಮೂಲಕ ಸಮೀಪದ ಕೆರೆಗಳಿಗೆ ಸೇರುತ್ತದೆ. ಇದರಿಂದಾಗಿ ಸುತ್ತಲೂ ಕನಿಷ್ಠ ಇನ್ನೂರು ಎಕರೆಯಷ್ಟು ಕೃಷಿ ಭೂಮಿಗೆ ಧಕ್ಕೆಯಾಗಲಿದೆ' ಎನ್ನುವ ಕಾರಣ ನೀಡಿ ಉಷ್ಣ ವಿದ್ಯುತ್ ಸ್ಥಾವರ ಯೋಜನೆಯನ್ನು ಕೈ ಬಿಟ್ಟಿತ್ತು.

ವಿದ್ಯಾರ್ಥಿಯೊಬ್ಬನ ಬಲವಾದ ಕೂಗು ಆಳುವ ವರ್ಗದ ನಿರ್ಧಾರವನ್ನೂ ಬದಲಿಸಬಲ್ಲದು ಎನ್ನುವ ವಿಚಾರವೇ ಅಂಜಲಿಯನ್ನು ಸೋಜಿಗಗೊಳಿಸಿತ್ತು. ತಾನು ಅಂದುಕೊಂಡಂತೆ ನಡೆದಿದ್ದರೂ ಮನೋಹರ ಆ ಬಗ್ಗೆ ಏನನ್ನೂ ಮಾತನಾಡಲಿಲ್ಲ. ಆ ಹೊತ್ತಿಗಾಗಲೇ ಒಂದಿಷ್ಟು ಸಲುಗೆ ಅಂಜಲಿಯೊಂದಿಗೆ ಬೆಳೆಸಿಕೊಂಡಿದ್ದ ಮನೋಹರ, ಅದೇ ಮೊದಲು ಅವಳನ್ನು ಅಗ್ರಹಾರ ಸರ್ಕಲ್‌ನಲ್ಲಿದ್ದ ಚಂದ್ರು ಹೋಟೇಲ್‌ಗೆ ಕರೆದುಕೊಂಡು ಹೋದ. ದೋಸೆ ತಿನ್ನುವಾಗ ಅವನ ವ್ಯಕ್ತಿತ್ವಕ್ಕೆ ಒಂದಿಷ್ಟೂ ಹೊಂದಿಕೆಯಾಗದ ಮಾತುಗಳನ್ನಷ್ಟೇ ಮಾತನಾಡಿದ. ಅಂಜಲಿಯೂ ಅವನನ್ನು ತಡೆಯಲಿಲ್ಲ. ಮನೋಹರ ಪ್ರೀತಿ, ಮದುವೆ, ಪುಟ್ಟ ಮನೆ ಹೀಗೆ ಏನೇನೋ ಹೇಳುತ್ತಾ ಹೋದಂತೆ ಅವನೊಳಗಿನ ಕೆಂಪು ಸಮುದ್ರದ ನಡುವಿನಿಂದ ಸಣ್ಣ ದೋಣಿಯೊಂದು ನಿರ್ಲಿಪ್ತವಾಗಿ ದಡ ಸೇರಿದಂತೆ ಅವನ ಆಕಾಂಕ್ಷೆಗಳು ಅವಳ ಎದೆ ಮುಟ್ಟಿದವು. ಅವನೊಂದಿಗೆ ಇದೇ ಮಾತುಗಳನ್ನು ಕೇಳುತ್ತ ಇಡೀ ರಾತ್ರಿಯನ್ನು ಅವನೊಂದಿಗೆ ಬೆಕ್ಕಿನ ಬಿಡಾರದಂತ ಅವನದೇ ಒಂದು ಸಣ್ಣ ರೂಮಿನಲ್ಲಿ ಕಳೆದ ಅಂಜಲಿಗೆ ಅದೊಂದು ಘಳಿಗೆ ಅವರಿಬ್ಬರೂ ಪರಸ್ಪರ ಲೀನವಾಗಿದ್ದರು ಎನ್ನುವುದು ಎಚ್ಚರವಾಗಿ ಅರಿವಿಗೆ ಬಂದಾಗ ಸೂರ್ಯ ನೆತ್ತಿಯನ್ನು ತಲುಪಿದ್ದ.

* * *

ಮನೋಹರನನ್ನು ಪೊಲೀಸರು ಹುಡುಕುತ್ತಿದ್ದಾರೆ ಎನ್ನುವುದು ಗೊತ್ತಾದಾಗ ಅಂಜಲಿ ಇನ್ನೂ ಕಾಲೇಜಿಗೆ ತಲುಪಿರಲಿಲ್ಲ. ಇವನು ಮತ್ತಾವ ರಗಳೆಗೆ ತನ್ನನ್ನು ಒಡ್ಡಿಕೊಂಡಿದ್ದಾನೆ ಎಂದು ಗಾಬರಿಯಾಗಿ ಕಾಲೇಜು ತಲುಪಿದ ಅಂಜಲಿಗೆ ತಿಳಿದಿದ್ದು ಇಷ್ಟು. ಮನೋಹರನೊಂದಿಗೆ ಹೀಗೆ ಅನೇಕ ವಿಚಾರಗಳಲ್ಲಿ ಕೈಜೋಡಿಸಿ ಬೀದಿಗಿಳಿಯುತ್ತಿದ್ದ ಹುಡುಗರಿಗೆ ಹಾಜರಾತಿಯ ಕೊರತೆಯ ಕಾರಣದಿಂದ ಪರೀಕ್ಷೆ ಬರೆಯುವುದಕ್ಕೆ ಅವಕಾಶವಿಲ್ಲ ಎಂದು ಕಾಲೇಜು ಮಂಡಳಿ ನಿರ್ಧರಿಸಿತ್ತು. ಇದರಿಂದ ಕುಪಿತಗೊಂಡಿದ್ದ ಮನೋಹರ ಪ್ರಿನ್ಸಿಪಾಲರೊಂದಿಗೆ ಕಳೆದ ಸಂಜೆ ಒಂದು ಸಣ್ಣ ಪ್ರಮಾಣದ ಜಗಳವನ್ನು ಮಾಡಿದ್ದನು. ಅದಾದ ನಂತರ ಕಾಣೆಯಾದ ಮನೋಹರ ಇಡೀ ದಿನ ಕಾಣಲಿಲ್ಲ. ಪೊಲೀಸರೂ ಅವನನ್ನು ಕಾದು, ಸೋತು ಕಡೆಗೆ ಹೊರಟುಹೋದರು.

ಈ ಘಟನೆ ನಡೆದ ಮರುದಿನ ಕಾಲೇಜಿನಲ್ಲಿ ನಿಧಾನವಾಗಿ ಮಾತುಗಳು ಕೇಳಿಬರಲು ಆರಂಭವಾದವು. ಮನೋಹರ ಹೀಗೆ ಎಲ್ಲದಕ್ಕೂ ಜಗಳ ತೆಗೆಯುವುದಕ್ಕೆ ಹಣ ಕೇಳಿ ತೆಗೆದುಕೊಳ್ಳುತ್ತಾನಂತೆ. ಅವನ ಊರು, ಅಪ್ಪ, ಅಮ್ಮ ಯಾರಿಗಾದರೂ